## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ನಡವಳಿಗಳು

ವಿಷಯ: 2023-24ನೇ ಸಾಲಿನಲ್ಲಿ 09 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಕೊರತೆಯಾಗಿರುವ ಮಾಹೆಗಳಿಗೆ ಗೌರವಧನವನ್ನು ಪಾವತಿಸಲು ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಅನುದಾನದ ಬಿಡುಗಡೆಯ ಆದೇಶ ಸಂಖ್ಯೆ:ಇಡಿ143ಹೆಚ್‌ಪಿಸಿ2023, ದಿನಾಂಕ:22.01.2024.
2. ಸರ್ಕಾರದ ಆದೇಶ ಸಂಖ್ಯೆ:ಇಡಿ/171/ಡಿಸಿಇ2023, ದಿನಾಂಕ:28.08.2023.
3. ಪತ್ರಸಂಖ್ಯೆ: ಕಾಶಿಇ/ ನೇವಿ-1/ ಅಉಅ/90/2023-24, ದಿನಾಂಕ:24.08.2023, ದಿ:13.09.2023 ಮತ್ತು ದಿನಾಂಕ:21.09.2023.

*****

<u>ಪ್ರಸ್ತಾವನೆ:</u>

2023-24ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: 2202-03-103-2-01(324) ಇತರೆ ಸರ್ಕಾರಿ ಕಾಲೇಜುಗಳು ಅತಿಥಿ ಉಪನ್ಯಾಸಕರ ಗೌರವಧನರಡಿಯಲ್ಲಿ ಒಟ್ಟು ರೂ. 261,00,00,000/-ಗಳ ಅನುದಾನ ಹಂಚಿಕೆ ಮಾಡಲಾಗಿರುತ್ತದೆ. ಸರ್ಕಾರದಿಂದ ಮೂರು ಚತುರ್ಮಾಸದ ಕಂತುಗಳಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದಲ್ಲಿ ಈವರೆಗೆ ಮಾರ್ಚ್-2023 ರಿಂದ ಫೆಬ್ರವರಿ-2024ರವರೆಗೆ ಹಾಗೂ ಹಿಂದಿನ ಸಾಲಿನ ಮಾಹೆಗಳಿಗೆ ಕೊರತೆ ಗೌರವಧನದ ಪಾವತಿಗಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ ಹಾಗೂ ಹೆಚ್ಚುವಾಗಿ ಉಳಿಕೆಯಾಗಿರುವ ಅನುದಾನದಲ್ಲಿ 09 ಕಾಲೇಜುಗಳಿಂದ ಪ್ರಾಂಶುಪಾಲರುಗಳು ತಡವಾಗಿ ಸಲ್ಲಿಸಿರುವ ಪ್ರಸ್ತಾವನೆಯ ಮೇರೆಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಗೌರವಧನದ ಪಾವತಿಗಾಗಿ ಅನುದಾನ ಬಿಡುಗಡೆಗೆ ಈ ಆದೇಶ.

ಆದೇಶ ಸಂಖ್ಯೆ: ಕಾಶಿಇ/ಆಯವ್ಯಯ/ಅಉಗೌಧ/04/2023-24, ಬೆಂಗಳೂರು ದಿನಾಂಕ: 23.02.2024.

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ತಡವಾಗಿ ಸಲ್ಲಿಸಿರುವ 09 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2023-24ನೇ ಸಾಲಿಗೆ ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಗೌರವಧನ ಪಾವತಿಸಲು ಲೆಕ್ಕಶೀರ್ಷಿಕೆ 2202-03-103-2-01-324ರಡಿಯಲ್ಲಿ ಒಟ್ಟು ರೂ. 13,92,606/-(ಹದಿಮೂರು ಲಕ್ಷದ ತೊಂಭತ್ತೆರಡು ಸಾವಿರದ ಆರು ನೂರ ಆರು ರೂಪಾಯಿಗಳು ಮಾತ್ರ)ಗಳನ್ನು ಪ್ರಾದೇಶಿಕ ಕಛೇರಿವಾರು ಅನುದಾನವನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರುಗಳಿಗೆ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

<u>(ಟಿಪ್ಪಣಿಯು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ).</u>

ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ

<u>ಷರತ್ತುಗಳು:</u>

1. 2023-24ನೇ ಸಾಲಿನಲ್ಲಿ ವಿವಿಧ ವಿಷಯಗಳಿಗೆ ಸರ್ಕಾರದ ಆದೇಶ ಮತ್ತು ಈ ಕಛೇರಿಯ ಸುತ್ತೋಲೆಯ ಸಂಖ್ಯೆ:ಕಾಶಿಇ/ನೇವಿ-1/ಅಉಅ/90/2023-24, ದಿನಾಂಕ:24.08.2023, ದಿ:13.09.2023 ಮತ್ತು ದಿನಾಂಕ:21.09.2023ರ ಆದೇಶದಂತೆ ಅತಿಥಿ ಉಪನ್ಯಾಸಕರಾಗಿ ನೇಮಕಗೊಂಡು ಪ್ರಾದೇಶಿಕ ಜಂಟಿನಿರ್ದೇಶಕರ ಕಛೇರಿಯಿಂದ ಕಡ್ಡಾಯವಾಗಿ ಅನುಮೋದನೆಯನ್ನು ಪಡೆದ ಅತಿಥಿ ಉಪನ್ಯಾಸಕರುಗಳಿಗೆ ಗೌರವಧನವನ್ನು ಪಾವತಿಸತಕ್ಕದ್ದು ಮತ್ತು ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಂದ ಅನುಮೋದನೆಗೊಂಡಿಲ್ಲದ ಅತಿಥಿ ಉಪನ್ಯಾಸಕರುಗಳಿಗೆ ಗೌರವಧನ ಪಾವತಿಸಿದ್ದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿ ಮಾಡಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಹಾಗೂ <u>ಅತಿಥಿ ಉಪನ್ಯಾಸಕರುಗಳು ಕಾಲೇಜುಗಳಿಗೆ ಹಾಜರಾಗಿ ಕರ್ತವ್ಯ ನಿರ್ವಹಿಸಿರುವ ಅವಧಿಗೆ ಮಾತ್ರ ಗೌರವಧನವನ್ನು</u>

---2

o/c

ಪಾವತಿಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

2. ಈ ಕಛೇರಿಯ ವೆಬ್-ಸೈಟ್‌ನಲ್ಲಿ ಪ್ರಕಟಿಸಿರುವ ಮಾರ್ಗಸೂಚಿಯಂತೆ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ವಿಭಾಗಿಸಿ 15/19 ಗಂಟೆಗಳ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರುಗಳು ನೇಮಕಗೊಂಡಿರಬೇಕು. ಅತಿಥಿ ಉಪನ್ಯಾಸಕರನ್ನು ತೆಗೆದುಕೊಳ್ಳುವ ಉದ್ದೇಶದಿಂದ ಹೆಚ್ಚುವರಿ ವಿಭಾಗ ತೆರೆದು ಹೆಚ್ಚಿನ ಕಾರ್ಯಭಾರ ತೋರಿಸಿ ಅಥವಾ ಹೆಚ್ಚುವರಿ ಕಾರ್ಯಭಾರ ಲೆಕ್ಕಚಾರ ಮಾಡಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡು ಗೌರವಧನ ಪಾವತಿಸಿದ್ದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿ ಮಾಡಿ ಸೂಕ್ತ ಕ್ರಮಕೈಗೊಳ್ಳಲಾಗುವುದು.

3. 2023-24ನೇ ಸಾಲಿನಲ್ಲಿ ಗೌರವಧನಕ್ಕಾಗಿ ಬಿಡುಗಡೆ ಮಾಡಲಾಗಿರುವ ಅನುದಾನದಲ್ಲಿ ಕಡ್ಡಾಯವಾಗಿ ಪ್ರಾದೇಶಿಕ ಜಂಟಿನಿರ್ದೇಶಕರ ಕಛೇರಿಯಿಂದ ಅನುಮೋದನೆಯನ್ನು ಪಡೆದಿರಬೇಕು ಹಾಗೂ ಅತಿಥಿ ಉಪನ್ಯಾಸಕರುಗಳು ಕಾಲೇಜುಗಳಿಗೆ ಹಾಜರಾಗಿ ತರಗತಿಗಳಲ್ಲಿ ಕರ್ತವ್ಯ ನಿರ್ವಹಿಸಿದ್ದಲ್ಲಿ ಮಾತ್ರ ಗೌರವಧನವನ್ನು ಪಾವತಿಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಕೆಲವು ಅತಿಥಿ ಉಪನ್ಯಾಸಕರುಗಳಿಂದ ಪ್ರಾಂಶುಪಾಲರು ಗೌರವಧನವನ್ನು ಪಾವತಿಸುವಲ್ಲಿ ವಿಳಂಬ ಮಾಡುವುದರ ಬಗ್ಗೆ ದೂರನ್ನು ಸಲ್ಲಿಸಿರುವುದರಿಂದ ವಿಳಂಬ ಮಾಡದೇ ಗೌರವಧನವನ್ನು ಪಾವತಿಸಲು ಸೂಕ್ತ ಕ್ರಮಕೈಗೊಳ್ಳಬೇಕೆಂದು ಸೂಚಿಸಲಾಗಿದೆ. ಒಂದು ವೇಳೆ ವಿಳಂಬವಾದಲ್ಲಿ ಪ್ರಾಂಶುಪಾಲರುಗಳೇ ನೇರ ಜವಾಬ್ದಾರರಾಗಿರುತ್ತಾರೆ. ಆದ್ದರಿಂದ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ವ್ಯಪಗತ ಮಾಡದೇ ನಿಗದಿತ ಅವಧಿಯೊಳಗೆ ಬಳಸಿಕೊಂಡು ಕಡ್ಡಾಯವಾಗಿ ಬಳಕೆ ಪ್ರಮಾಣಪತ್ರವನ್ನು ಸಲ್ಲಿಸುವುದು. ಸದರಿ ಅನುದಾನವನ್ನು ವ್ಯಪಗತ ಮಾಡಿದ್ದಲ್ಲಿ ಪ್ರಾಂಶುಪಾಲರುಗಳೇ ನೇರ ಜವಾಬ್ದಾರರಾಗಿರುತ್ತಾರೆ.

ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ

ಇವರಿಗೆ:

ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವ ಎಲ್ಲಾ ಡಿಡಿಓ ಗಳಿಗೆ

ಪ್ರತಿಯನ್ನು:

1. ಇಲಾಖಾ ವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ- ಅನುದಾನ ತುರ್ತಾಗಿ ಬಳಕೆ ಮಾಡಲು ಪ್ರಾದೇಶಿಕ ಕಛೇರಿ ವ್ಯಾಪ್ತಿಯ ಪ್ರಾಂಶುಪಾಲರುಗಳಿಗೆ ಸೂಚಿಸಿ ಅನುಪಾಲನಾ ವರದಿ ಸಲ್ಲಿಸುವುದು.
2. ಮ್ಯಾನೇಜರ್/ ಅಧೀಕ್ಷಕರು ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರಕಛೇರಿ, ಬೆಂಗಳೂರು – ಸದರಿ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
3. ಮ್ಯಾನೇಜರ್/ ಅಧೀಕ್ಷಕರು ನೇಮಕಾತಿ ವಿಭಾಗ, ಕೇಂದ್ರಕಛೇರಿ, ಬೆಂಗಳೂರು- ಮಾಹಿತಿಗಾಗಿ
4. ಕಛೇರಿ ಪ್ರತಿ.

2023-24ನೇ ಸಾಲಿನ ಅತಿಥಿ ಉಪನ್ಯಾಸಕರುಗಳಿಗೆ ಕೊರತೆಯಾಗಿರುವ ಮಾಹೆಗಳಿಗೆ ಗೌರವಧನ ಪಾವತಿಗಾಗಿ ಅನುದಾನ ಬಿಡುಗಡೆಯ ಆದೇಶ ಸಂಖ್ಯೆ: ಕಾಶಿಇ/ಆಯವ್ಯಯ/ಅಉಗೌಧ/04/2023-24, ಬೆಂಗಳೂರು, ದಿನಾಂಕ: 23.02.2024.

| ಕ್ರ.ಸಂ. | ಡಿಡಿಓ ಸಂಖ್ಯೆ | ಕಾಲೇಜಿನ ಹೆಸರು | ಬಿಡುಗಡೆ ಮಾಡಬೇಕಾಗಿರುವ ಒಟ್ಟು ಅನುದಾನ |
|---|---|---|---|
| 1 | 2 | 3 | 4 |
| | | ಬೆಂಗಳೂರು | |
| 1 | 181530 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಗೇಪಲ್ಲಿ | 9176 |
| 2 | 181710 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾ | 21877 |
| 3 | 181490 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ರಾಮನಗರ | 5287 |
| | | ಒಟ್ಟು ರೂ | 36340 |
| | | ಧಾರವಾಡ | |
| 1 | 180910 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನರೇಗಲ್ | 475256 |
| 2 | 182850(ಸಪ್ರದಕಾ ಧಾರವಾಡ) | ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯ ಕಾಲೇಜು, ಧಾರವಾಡ | 486400 |
| | | ಒಟ್ಟು ರೂ | 961656 |
| | | ಕಲಬುರ್ಗಿ | |
| 1 | 183480 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲಸೂರ | 74667 |
| 2 | 181020 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆಂಭಾವಿ | 266593 |
| | | ಒಟ್ಟು ರೂ | 341260 |
| | | ಶಿವಮೊಗ್ಗ | |
| | 182470 | ಶ್ರೀ ಶ್ರೀ ಶಿವಲಿಂಗೇಶ್ವರ ಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ | 49537 |
| 1 | 180660 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಿಪ್ಪನ್ ಪೇಟೆ | 3813 |
| | | ಒಟ್ಟು ರೂ | 53350 |
| | | ಒಟ್ಟಾರೆ ಮೊತ್ತ | 1392606 |

ಒಟ್ಟು ರೂ. ಹದಿಮೂರು ಲಕ್ಷದ ತೊಂಭತ್ತೆರೆಡು ಸಾವಿರದ ಅರು ನೂರ ಆರು ರೂಪಾಯಿಗಳು ಮಾತ್ರ

ಕಾಲೇಜು ಶಿಕ್ಷಣ ನಿರ್ದೇಶಕರು